**ಸಾಕ್ಷಿಗೆ ದಿನಾಂಕಃ17-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ.KRG ವಕೀಲರಿಂದ ::**

ಗಂಗಾಧರಪ್ಪ ಎನ್ನುವವರು ನನ್ನ ಸಹೋದರ ಆಗಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಶೀಲಾ ಹಾಗೂ ಸಿಂಧುಶ್ರೀ ಎನ್ನುವ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ವ್ಯಕ್ತಿಗಳು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ 56/2009 ರಂತೆ ನನ್ನ ಹಾಗೂ ನನ್ನ ಸಹೋದರರ ವಿರುದ್ಧ ಹಿಂದೆ ಒಂದು ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯು ನಮ್ಮ ಕುಟುಂಬದ ಆಸ್ತಿಗಳ ವಿಭಾಗ ಕೋರಿ ಹೂಡಲಾಗಿತ್ತು ಎಂದರೆ ಸರಿ. ಸದರಿ ದಾವೆಯು 2012 ರಲ್ಲಿ ಅವರ ಪರವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ಡಿಕ್ರಿ ಆಧಾರದಲ್ಲಿ ಸದರಿಯವರು ಇದೇ ನ್ಯಾಯಾಲಯದಲ್ಲಿ FDP 13/2012 ರಂತೆ ಪ್ರಕರಣ ಹೂಡಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ಅಂತಿಮ ಡಿಕ್ರಿ ಆದೇಶ ಮಾಡಿ ಸದರಿಯವರ ಹೆಸರಿಗೆ ಅವರ ಪಾಲನ್ನು ಕೊಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ಕುಟುಂಬದ 15 ಆಸ್ತಿಗಳನ್ನು ಸೇರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಈ ಪ್ರಕರಣ ದಾವಾ ಆಸ್ತಿಗಳನ್ನು ಸೇರಿಸಿರಲಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನಾನಾಗಲೀ, ಆಥವಾ ಉಳಿದ ಪ್ರತಿವಾಗಳಾಲೀ ಈ ದಾವೆಯ ಆಸ್ತಿಯನ್ನು ಆ ದಾವೆಯಲ್ಲಿ ಸೇರಿಸುವಂತೆ ಕೇಳಿರಲಿಲ್ಲ ಎಂದರೆ ಸರಿ. 2009 ರಲ್ಲಿ ದಾವಾ ಶೆಡ್ಯೂಲ್ ಸ್ವತ್ತು ಅಸ್ತಿತ್ವದಲ್ಲಿ ಇರುವ ವಿಚಾರ ನನಗಾಗಲೀ ನನ್ನ ಸಹೋದರರಿಗಾಗಲೀ ತಿಳಿದಿರಲಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: